**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.93/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಸಚಿನ ಮಡ್ಡಿ | ಸಿಡಬ್ಲ್ಯೂ | 9 |
| ತಂದೆ ಹೆಸರು | ರಾಮಚಂದ್ರ | ಪಿಡಬ್ಲ್ಯೂ | 11 |
| ವಯಸ್ಸು | 34 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಹಾವೇರಿ. | | |

**ದಿಃ 21.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

**1).** ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಚಾ.ಸಾ-1, 4 ರಿಂದ 8, 10, 11 ರವರು ಗೊತ್ತು. ನನಗೆ ಯಾವುದೇ ಗಲಾಟೆ ಗೊತ್ತಿಲ್ಲ. ಆರೋಪಿತರು ಚಾ.ಸಾ-1 ರವರಿಗೆ ಗಲಾಟೆ ಮಾಡಿ, ಹೊಡೆದು, ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿದ್ದನ್ನು ನೋಡಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಆಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.**

**2)** ದಿನಾಂಕಃ 22.06.2022 ರಂದು ರಾತ್ರಿ 11-00 ಘಂಟೆಯಲ್ಲಿ ನಾನು, 4 ರಿಂದ 8,10 ಮತ್ತು 11 ರವರು ಹಾವೇರಿಯ ಕೋರ್ಟ ಪಕ್ಕದಲ್ಲಿರುವ ಕಾರ್ ಸ್ಟ್ಯಾಂಡ ಹತ್ತಿರ ಇದ್ದಾಗ ಆರೋಪಿತರು ಲೋಕೋಪಯೋಗಿ ಇಲಾಖೆಯ ಗೇಟ್ ಹತ್ತಿರ ನಿಂತ ಚಾ.ಸಾ-1 ನೇದವರಿಗೆ ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆಬಡಿ ಮಾಡಿ, ಜೀವ ಬೆದರಿಕೆ ಹಾಕಿದರು ಅಂದರೆ ಸರಿಯಲ್ಲ. ಅಲ್ಲಿದ್ದ ಗಿರೀಶ ಮತ್ತು ಇತರೆಯವರು ಗಲಾಟೆಯನ್ನು ಬಿಡಿಸಿದೇವು ಅಂದರೆ ಸರಿಯಲ್ಲ. ಚಾ.ಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಈ

ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ 26.06.2022 ರಂದು ತನಿಖಾಧಿಕಾರಿಯ ಮುಂದೆ ನೀಡಿದ ಹೇಳಿಕೆಯಲ್ಲಿನ ಅಂಶಗಳನ್ನು ಓದಿ ಹೇಳಿದ್ದು ಅಲ್ಲಗಳೆದಿರುತ್ತಾರೆ. ಅಲ್ಲಗಳೆದ ಭಾಗವನ್ನು ನಿ.ಪಿ-14 ಎಂದು ಗುರುತಿಸಲಾಯಿತು. ನಿ.ಪಿ-14 ರಲ್ಲಿರುವ ವಿಚಾರ ನನಗೆ ಗೊತ್ತಿದ್ದರೂ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎನ್.ಎಫ್.ಬಿ ವಕೀಲರಿಂದಃ ಆರೋಪಿತರ ಪರವಾಗಿಃಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.